೧ ರೂಪಾಯಿಗಳಿಗೆ ಮಾರಿರತಕ್ಕದ್ದು ಮಂತ್ರಿಗಳ ಗಮನಕ್ಕೆ ಬಂದಿದೆಯೆ? ಬೂಸಾ ರೇಟು ಕೂಡ ಜಾಸ್ತಿಯಾಗಿದೆ. ಹಾಲನ್ನು ಒಂದು ಲೀಟರ್‌ಗೆ ೪ ರೂಪಾಯಿಗಳಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡು, ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಒಂದೇ ಒಂದು ಪ್ರಶ್ನೆ ಇದೆ ಅಧ್ಯಕ್ಷರೇ. ಇನ್ನು ಮುಂದಾದರೂ ತಪ್ಪು ದಾರಿಗೆ ಹೋಗುವುದು ಬೇಡ. ಸ್ವಲ್ಪ ನಷ್ಟ ಆದರೂ ಅನುಭವಿಸಿ. ಆದರೆ ಈ ರಜೆ ಹೋಗುವುದನ್ನು ಮಾತ್ರ ನಿಲ್ಲಿಸಿ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ, ಈ ಸಾಗ್ಗಿ ಕಾಲದಲ್ಲಿ ಸುಮಾರು ಮೂರು ಲಕ್ಷಕ್ಕೂ ಮೇಲ್ಪಟ್ಟು ಲೀಟರ್‌ನಷ್ಟು ಹಾಲು ಜಾಸ್ತಿಯಾಯಿತು. ನಮ್ಮ ಅನೇಕ ಯೋಜನೆಗಳು ಇನ್ನೂ ಕಾರ್ಯಗತವಾಗಿಲ್ಲ. ನಮ್ಮ ಯೋಜನೆಗಳು ಕಾರ್ಯಗತವಾದರೆ ೧೫ ಲಕ್ಷ ಲೀಟರ್ ಹಾಲು ವಿತರಣೆ ಮಾಡುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಸರ್ಕಾರ ಕೂಡ ಇದರ ಬಗ್ಗೆ ಗಮನ ಹರಿಸಿ ಕೆಲವು ಪ್ರಮುಖವಾದ ಯೋಜನೆಗಳನ್ನು ಹಾಕಿಕೊಂಡಿದೆ. ಮುಖ್ಯವಾಗಿ ಶಿಥಿಲೀಕರಣ ಕೇಂದ್ರಗಳನ್ನು ಹೆಚ್ಚು ಮಾಡುವುದು. ಬೆಂಗಳೂರಿನಲ್ಲಿ ಮೂರು ಶಿಥಿಲೀಕರಣ ಕೇಂದ್ರ ಬರಲಿದೆ. ಅದೇರೀತಿ ಮೈಸೂರಿನಲ್ಲಿ ಈ ಒಕ್ಕೂಟದಲ್ಲಿ ೬೦ ಸಾವಿರ ಲೀಟರ್ ಸಾಮರ್ಥ್ಯವುಳ್ಳ ಶಿಥಿಲೀಕರಣ ಯಂತ್ರ ಬರಲಿದೆ. ತುಮಕೂರಿನಲ್ಲಿ ೩೬ ಸಾವಿರ ಲೀಟರ್ ಸಾಮರ್ಥ್ಯವುಳ್ಳ ಶಿಥಿಲೀಕರಣ ವ್ಯವಸ್ಥೆ ಸಧ್ಯದಲ್ಲೇ ಜಾರಿಗೆ ಬರಲಿದೆ. ಹಾಗೆಯೇ ಶಿವಮೊಗ್ಗ, ಧಾರವಾಡದಲ್ಲಿ ಕೂಡ ಶಿಥಿಲೀಕರಣ ಕೇಂದ್ರಗಳು ಸಧ್ಯದಲ್ಲೇ ಬರಲಿವೆ. ಇವೆಲ್ಲವೂ ಕಾರ್ಯಗತವಾದರೆ ಕರ್ನಾಟಕದಲ್ಲಿ ಎಲ್ಲಾ ಹಾಲನ್ನು ವಿತರಣೆ ಮಾಡತಕ್ಕಂಥ ಸಾಮರ್ಥ್ಯ ಇರುತ್ತದೆ ಈ ಇಡೀ ವ್ಯವಸ್ಥೆಯನ್ನು ಅಂದರೆ ಈ ಒಕ್ಕೂಟಗಳನ್ನು ಬೇರೆಮಾಡಿ ಪ್ರತಿಯೊಂದು ಜಿಲ್ಲೆಯಲ್ಲೂ ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿ ಹಾಲಿನ ವಿತರಣೆಯನ್ನು ಕೂಡ ಅವರೇ ಮಾಡಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ, ಈ ಸಂದರ್ಭದಲ್ಲಿ ಇಡೀ ಕರ್ನಾಟಕದಲ್ಲಿ ಇರತಕ್ಕಂಥ ಎಲ್ಲಾ ಯೋಜನೆಗಳು ಕಾರ್ಯಗತವಾದರೆ ಸುಮಾರು ಹದಿನೈದು ಲಕ್ಷ ಲೀಟರ್ ಹಾಲಿನ ಪದಿವಾಟು ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ರಜಾ ಘೋಷಿಸಲಿಕ್ಕೆ ಸರ್ಕಾರಕ್ಕೇನೂ ಇಷ್ಟ ಇರಲಿಲ್ಲ. ಆದರೆ ಇದು ಅನಿವಾರ್ಯವಾಗಿತ್ತು. ಗುಜರಾತಿನಲ್ಲಿ, ಇರುವುದು ಭಾರತದಲ್ಲೇ ಹೆಚ್ಚು ಪ್ರಮಾಣದಲ್ಲಿ ಹಾಲು ಉತ್ಪಾದನೆಯಾಗುತ್ತದೆ. ಬಂದೊಂದು ಸಲ ಅಲ್ಲಿಯೂ ಕೂಡ ಇಂತಹ ಅನಿವಾರ್ಯವಾಗುತ್ತದೆ. ನಮ್ಮ ರೈತರಿಗೆ ತೊಂದರೆಯಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ಸರ್ಕಾರದ ಗಮನಕ್ಕೆ ಇದೆ. ಸುಮಾರು ೩ ಲಕ್ಷ ಲೀಟರ್ ಹಾಲನ್ನು ನಾವು ಬೇರೆ ಗರ್ಭಿಣಿ ಸ್ತ್ರೀಯರಿಗೆ ಕೊಟ್ಟರೂ ಕೂಡ ಹೆಚ್ಚಿಗೆ ಇರತಕ್ಕಂಥ ಹಾಲನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ, ಇದು ರಾಷ್ಟ್ರೀಯ ನಷ್ಟವಾಗುತ್ತಿದೆ. ಆದ್ದರಿಂದ, ರೈತರು ಉಪಯೋಗಿಸಿಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದು ಇದು ಅನಿವಾರ್ಯವಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ಹಾಲು ಉತ್ಪಾದನೆ ಯಾವ ಹಂತಕ್ಕೆ ಬಂದಿದೆಯೆಂದರೆ, ರೈತ ಮೂರು-ನಾಲ್ಕು ಹಸುಗಳನ್ನು ಕಟ್ಟಿಕೊಂಡಿರುತ್ತಾನೆ. ಶ್ರೀ ರಮೇಶಕುಮಾರ್‌ರವರೇ ಒಮ್ಮೆ ಹೇಳಿದ್ದರು ಇಲ್ಲಿ ಒಂದು ದಿವಸ ಉತ್ಪಾದನೆ ಮಾಡಿದ ೮೦ ಲೀಟರ್ ಹಾಲನ್ನು ಒಂದು ರೂಪಾಯಿಗೆ ಲೀಟರ್‌ನಂತೆ ಮದನಪಲ್ಲಿಗೆ ತೆಗೆದುಕೊಂಡು ಹೋಗಿ ಮಾರಿದ್ದೇನೆ ಎಂದು ಅವರು ಹೇಳಿದ್ದನ್ನು ನಾನು ನೆನಪು ಮಾಡಿಕೊಳ್ಳುತ್ತೇನೆ. ರೈತ ಹೆಚ್ಚು ಹಾಲನ್ನು ಉಪಯೋಗಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ನಾನು ಕೇಳುತ್ತೇನೆ, ನಿಮಗೆ ನಷ್ಟ ಎಷ್ಟು ಆಗುತ್ತದೆ? ಒಟ್ಟು ಐದು ಕೋಟಿಗಿಂತ ಹೆಚ್ಚು ನಷ್ಟ ಆಗುತ್ತಿಲ್ಲ. ಐದು ಕೋಟಿ ನಷ್ಟಕ್ಕೆ ಒಂದು ಕೋಟಿ ಅಲ್ಲ, ೫.೫ ಲಕ್ಷ ಸಂಸಾರಗಳಿಗೆ ಅನ್ಯಾಯ ಮಾಡುವುದು ಸರಿಯೆ? ನಿಮಗೆ ನಷ್ಟ ಆಗುವುದು ಎಷ್ಟು ಮತ್ತು ರೈತರಿಗೆ ಆಗಿರುವ ನಷ್ಟ ಎಷ್ಟು ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ? ನಷ್ಟವಾದರೂ ಕೂಡ, ಫೆಡರೇಶನ್‌ನವರು ನೂರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆಸುತ್ತಾರೆ- ೩-೪ ಕೋಟಿ ರೂಪಾಯಿಗಳು ನಷ್ಟವಾದರೂ ಆದೇನು ಹೆಚ್ಚಿನ ತೊಂದರೆಯಾಗುವುದಿಲ್ಲ. ಇದು ಭದ್ರವಾಗಿಯೇ ಇದೆ. ಅಲ್ಲದೆ ತಳಹದಿ ಕೂಡ ಚೆನ್ನಾಗಿ ಇದೆ. ಆದ್ದರಿಂದ ಇಂತಹ ಒಂದು ತಪ್ಪು ದಾರಿಗೆ ನೀವು ಹೋಗುವುದು ಬೇಡ. ರಜೆ ಘೋಷಿಸಿದರೆ ನಿಮಗೆ ಎಷ್ಟು ನಷ್ಟವಾಗುತ್ತದೆ ಮತ್ತು ರೈತರಿಗೆ ಎಷ್ಟು ನಷ್ಟವಾಗುತ್ತದೆ ಎಂದು ಲೆಕ್ಕ ಹಾಕಿದರೆ, ನಿಜವಾಗಿಯೂ ಕೂಡ ನೀವು ರೈತರ ಹಿತರಕ್ಷಣೆ ಮಾಡಿದ್ದೀರಾ ಎಂದು ನೀವೇ ಹೇಳಬೇಕಾಗುತ್ತದೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ. ಇದು ಲಾಭ ನಷ್ಟದ ಪ್ರಶ್ನೆ ಅಲ್ಲ. ೩ ಲಕ್ಷ ಲೀಟರ್ ಹಾಲನ್ನು ನಾವು ಸಂಸ್ಕರಣ ಮಾಡುವುದಕ್ಕೆ ಸಾಮರ್ಥ್ಯ ಇಲ್ಲದೇ ಇರುವಾಗ, ವಿತರಣೆ ಮಾಡುವುದಕ್ಕೆ ಯೋಜನೆ ಕಾರ್ಯಗತವಾಗದೇ ಇರುವಾಗ, ಇಷ್ಟು ಹಾಲನ್ನು ಹೊಳೆಗೆ ಹಾಕತಕ್ಕದ್ದು ಸರಿಯಲ್ಲ. ಸಂಸ್ಕರಣ ಯೋಜನೆ ತಯಾರಿದ್ದು, ವಿತರಣೆ ಸಾಧ್ಯವಿದ್ದರೆ ಈ ಹಾಲನ್ನು ರಕ್ಷಣೆ ಮಾಡಬಹುದಿತ್ತು. ಅದರ ಬದಲು ಒಂದು ರೂಪಾಯಿ, ಎರಡು ರೂಪಾಯಿ ಕೊಟ್ಟರೂ ಕೂಡ ರೈತರಿಗೆ ಉಪಯೋಗಕ್ಕೆ ಬರುತ್ತದೆ ಎನ್ನುವ ದೃಷ್ಟಿಯಿಂದ ರಜೆಯನ್ನು ಸ್ವಲ್ಪ ಕಾಲದಲ್ಲಿ ಮಾತ್ರ ಘೋಷಿಸಲಾಗುತ್ತದೆ. ಬೇಸಿಗೆಯಲ್ಲಿ ಪುನಃ ರಜೆ ಘೋಷಿಸುವ ಪ್ರಶ್ನೆಯೇ ಬರುವುದಿಲ್ಲ.

ಈಗ ೧೫ ದಿವಸಗಳಿಂದ ರಜೆಯನ್ನು ಘೋಷಣೆ ಮಾಡುತ್ತಾ ಇಲ್ಲ. ಅನಿವಾರ್ಯವಾದಾಗ ಮಾತ್ರ, ಬೇರೆ ಮಾರ್ಗವಿಲ್ಲದೆ ಮಾಡುತ್ತಿದ್ದೇವೆಂಬುದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗಾಗಲೇ ಮಿಲ್ಕ್ ಪೌಡರ್ ಯೂನಿಟ್ ಹಾಗೂ ಸಂಸ್ಕರಣ ಕೇಂದ್ರವನ್ನು ಮಾಡುತ್ತೇವೆಂದು ಹೇಳಿದಿರಿ. ಇವುಗಳನ್ನು ತಕ್ಷಣ ಮಾಡಿದರೆ, ಈ ಸಮಸ್ಯೆ ತಪ್ಪುತ್ತದೆ. ಸ್ವಲ್ಪ ಕಾಲದಲ್ಲಿ ಹೆಚ್ಚು ಹಾಲು ಸಿಗುತ್ತದೆ. ಆದ್ದರಿಂದ ಬರುವ ಸ್ವಲ್ಪ ಕಾಲದ ಹೊತ್ತಿಗಾದರೂ ಇಂತಹ ಕೆಲಸಗಳಿಗೆ ಕೈಹಾಕುವುದಿಲ್ಲವೆಂದು ಆಶ್ವಾಸನೆ ಕೊಟ್ಟರೆ ಸಾಕು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಈಗಾಗಲೇ ನಾವು ಕೋವಾ ಹೆಚ್ಚು ಮಾಡುವ ಸಾಮರ್ಥ್ಯವನ್ನು ಪಡೆದಿದ್ದೇವೆ. ಒಣಗಿಸಿದ ಪೌಡರ್ ಮಾಡತಕ್ಕಂಥಾದ್ದು ಎಕ್ಸ್‌ಪ್ಯಾ ಆಗಿದೆ. ಬೇರೆ ರಾಜ್ಯಗಳಲ್ಲಿ ಆಗಿರುವುದಕ್ಕಿಂತ ಹೆಚ್ಚು ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ. ಬಲ್ಕ್ ವೆಂಡಿಂಗ್ ಬೂತ್‌ಗಳನ್ನು ವಿಸ್ತರಣೆ ಮಾಡಿ, ಯೋಜನಾಬದ್ಧವಾಗಿ ಅಲ್ಲಿ ವಿತರಣೆ ಮಾಡುತ್ತಿದ್ದೇವೆ. ಇದೂ ಕೂಡ ಎಕ್ಸ್‌ಪ್ಯಾ (ವಿಸ್ತಾರ) ಆಗಿದೆ. ಕೋವಾವನ್ನು ಮಾನ್ಯ ಸದಸ್ಯರೂ ತಿಂದಿದ್ದಾರೆ, ರುಚಿ ಕೂಡ ಚೆನ್ನಾಗಿದೆ. ಕೋವಾ ಹೆಚ್ಚು ಮಾಡುವುದಕ್ಕೆ ಅವರು ಹೇಳಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ನಮ್ಮ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡುತ್ತೇನೆ.

ಖಾಸಗಿ ಕಾರ್ಯಕಲಾಪಗಳು

ಅಧ್ಯಕ್ಷರು. ೧೫ನೇ ಫೆಬ್ರುವರಿ ಒರಂದು ಶ್ರೀ ಕೆ. ಪಿಚ್. ಶ್ರೀನಿವಾಸರಾವರಿಂದ ಮಂಡಿಸಲಾದ ನಿರ್ಣಯದ ಮೇಲೆ ಚರ್ಚೆ ಮುಂದುವರಿಯುವುದು. ಈಗ ಮಾನ್ಯ ಎಸ್.ಕೆ. ಕಾಂತಾ ಅವರು ಮಾತನಾಡಲಿ ಆನಂತರ ಮಾನ್ಯ ವೆಂಕಟರಾಮಯ್ಯನವರು ಮಾತನಾಡಲಿ.

ಶ್ರೀ ಎಸ್. ಕೆ. ಕಾಂತಾ(ಗುಲ್ಬರ್ಗಾ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ. ಪಿಚ್. ಶ್ರೀನಿವಾಸರಾವರು ಮಂಡಿಸಿರುವ ಮದ್ಯಪಾನಕ್ಕೆ ಸಂಬಂಧಿಸಿದ ಒಂದು ಖಾಸಗಿ ನಿರ್ಣಯ ಸಭೆಯ ಮುಂದೆ ಇದೆ. ಮದ್ಯಪಾನದ ಕೆಲವು ನೀತಿಗಳಿಂದ ಬಡಜನರಿಗೆ ಕಾರ್ಮಿಕರಿಗೆ, ರೈತರಿಗೆ ಮತ್ತು ರೈತಕಾರ್ಮಿಕರಿಗೆ ಬಹಳ ತಾಪ ಪೊಡೆತ ಬೀಳುತ್ತಾ ಇರುವುದು ತಮಗೂ ಗೊತ್ತಿದೆ. ತಾವೂ ಕೂಡ ಮದ್ಯಪಾನ ವಿರೋಧಿ ಇರಬೇಕೆಂದು ತಮ್ಮ ಮುಖ ನೋಡಿದರೆ ನನಗನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಈಗ ಸೇಂದಿ ಗಿಡಗಳು ಹೆಚ್ಚಿಗೆ ಇಲ್ಲದಿದ್ದರು ಕೂಡ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಕೆಲವು ಗಿಡಗಳು ಮಾತ್ರ ಇವೆ. ಮೂರು ವರ್ಷಗಳಿಂದ ೨೭ ಲಕ್ಷಕ್ಕೆ ಹರಾಜು ಆಗುತ್ತಿತ್ತು. ಇವತ್ತಿನ ದಿವಸ ಅದು ೫೫ ಲಕ್ಷಕ್ಕೆ ನಿಂತಿದೆ. ಇವತ್ತು ಗಿಡಗಳು ಇಲ್ಲ, ಸೇಂದಿ ಬರುವುದು ಕೂಡ ಇಲ್ಲ. ಆದರೆ ಪಾರಾಟ ಮಾತ್ರ ಪಾಗೆಯೇ ನಡೆದುಕೊಂಡು ಬರುತ್ತಿದೆ, ಇದನ್ನು ಇವತ್ತು ವಿಚಾರ ಮಾಡಬೇಕಾಗಿದೆ. ಈಗ ಒಂದು ಡಿಪೋ ಇದ್ದರೆ, ಅಲ್ಲಿ ಅವರಿಗೆ ನೀರು ಬೇಕು, ಕ್ಲೋರಲ್ ಹೈಡ್ರೇಟ್ ಬೇಕು ಕೆವಿಕಲ್ಸ್ ಬೇಕು ಷುಗರ್ ಬೇಕು, ನೀರು ಹಾಕಿ ಕಲಿಸುವುದಕ್ಕೆ ಕೆಲವು ಜನರು ಬೇಕು. ಹೀಗೆ ಕಲೆಸಿ, ಜನರಿಗೆ ಪಾರಾತಕ್ಕಂತ ವ್ಯವಸ್ಥೆ ಬೆಂದಿನಿಂದ ಬಂದಿರತಕ್ಕಂತ ವ್ಯವಸ್ಥೆ ಇವರಿಂದ ಕುಡಿಯುವ ಜನರಿಗೆ, ಆರೋಗ್ಯದಮೇಲೆ ಸಾಕಷ್ಟು ದಾಳಿಯಾಗಿದೆ. ವಿಧಾನಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ, ಪಾರ್ಲಿಮೆಂಟಿನಲ್ಲಿ ನಾವು ಭಾಷಣಮಾಡುತ್ತೇವೆ. ಬಡರೈತರಿಗೆ, ಕಾರ್ಮಿಕರಿಗೆ ರೈತರಿಗೆ ರೈತ ಕಾರ್ಮಿಕರಿಗೆ ಒಳ್ಳೆಯ ಆರೋಗ್ಯ ಬೇಕಾ, ಅವರು ಸುಧಾರಿಸಬೇಕು, ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು ಎನ್ನತಕ್ಕಂತ ಮಾತನ್ನು ದಿನೇ ದಿನೇ ಆಡುತ್ತಿದ್ದೇವೆ. ಇಂತಹ